2451(3257) ಡಾ: ಅನ್ನದಾನಿ ಕೆ. (ಮಳವಳ್ಳಿ):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯವರು ನಡೆಸುತ್ತಿರುವ ಇಂಗ್ಲೀಷ್ ಕನ್ನಡ ಟೈಪರೈಟಿಂಗ್ ಮತ್ತು ಶೀಘ್ರಲಿಪಿ ಕೋರ್ಸ್‌ಗಳ ಜೊತೆಗೆ ಕಂಪ್ಯೂಟರ್, ಟೈಪರೈಟಿಂಗ್ ಮತ್ತು ಡಿ.ಟಿಪಿ ಮುಂತಾದ ಉದ್ಯೋಗ ಭರವಸೆಯ ಕೋರ್ಸ್‌ಗಳನ್ನು ಸೇರ್ಪಡೆ ಮಾಡಲು ಕ್ರಮ ಜರುಗಿಸುವರೇ;

ಆ) ಬಡ ಹಾಗೂ ಮಧ್ಯಮ ವರ್ಗದವರಿಗೆ ಉದ್ಯೋಗಾವಕಾಶಗಳನ್ನು ದೊರಕಿಸಿಕೊಳ್ಳಲು ಅನುಕೂಲವಾಗುವಂತೆ ಈ ಕೋರ್ಸ್‌ಗಳನ್ನು ಸೇರ್ಪಡೆಗೊಳಿಸಿ ಅನುಕೂಲ ಮಾಡಿಕೊಡಲು ಸರ್ಕಾರ ಮುಂದಾಗುವುದೆ;

ಇ) ಹೌದಾದಲ್ಲಿ, ಆ ಕುರಿತಾದ ತ್ವರಿತ ಕ್ರಮಗಳೇನು?

ಶ್ರೀ ಆರ್. ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಪ್ರಸ್ತುತ ಇಂತಹ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

2452(3258) ಡಾ: ಅನ್ನದಾನಿ ಕೆ. (ಮಳವಳ್ಳಿ):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಮಳವಳ್ಳಿ ಕ್ಷೇತ್ರ ವ್ಯಾಪ್ತಿಯಲ್ಲಿರುವ ಪದವಿ ಪೂರ್ವ ಕಾಲೇಜುಗಳಿಗೆ ಸ್ವಂತ ಕಟ್ಟಡ ಮತ್ತಿತರ ಮೂಲಭೂತ ಸೌಕರ್ಯಗಳನ್ನು ಒದಗಿಸಿರುವ ಸರ್ಕಾರಿ ಕಾಲೇಜುಗಳೆಷ್ಟು;

ಆ) ಎಷ್ಟು ಕಾಲೇಜುಗಳಲ್ಲಿ ಇವುಗಳ ಕೊರತೆ ಇದೆ;

ಇ) ಅಂಥ ಕಾಲೇಜುಗಳನ್ನು ಯಾವಾಗ ಈ ವ್ಯವಸ್ಥೆಗಳನ್ನು ಕಲ್ಪಿಸಲಾಗುವುದು;

ಈ) ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಗಮನಿಸಿ ಕಾಲೇಜುಗಳನ್ನು ಹೆಚ್ಚಿಸಲು ಮತ್ತು ಸುವ್ಯವಸ್ಥಿತವಾಗಿರಿಸಲು ಹಾಕಿಕೊಂಡ ಅಭಿವೃದ್ಧಿಪರ ಯೋಜನೆಗಳು ಯಾವುವು;

ಉ) ಮಹಿಳಾ ಶಿಕ್ಷಣಕ್ಕೆ ಒತ್ತುಕೊಡಲು ಹಮ್ಮಿಕೊಂಡಿರುವ ಶೈಕ್ಷಣಿಕ ಸವಲತ್ತುಗಳು ಮತ್ತು ಪ್ರೋತ್ಸಾಹಕ ಕ್ರಮಗಳೇನು;

ಶ್ರೀ ಆರ್. ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಮಳವಳ್ಳಿ ಕ್ಷೇತ್ರ ವ್ಯಾಪ್ತಿಯಲ್ಲಿ 2 ಸರ್ಕಾರಿ ಪದವಿಪೂರ್ವಕಾಲೇಜುಗಳಿವೆ (ಮಳವಳ್ಳಿ ಮತ್ತು ಹಲಗೂರುಗಳಲ್ಲಿ), ಅವುಗಳು ಸರ್ಕಾರಿ ಪ್ರೌಢ ಶಾಲಾ ಕಟ್ಟಡದಲ್ಲಿ ಪಾಳಿ ಪದ್ಧತಿಯಲ್ಲಿ ನಡೆಯುತ್ತಿರುತ್ತದೆ.

ಆ) ಈ ಎರಡೂ ಕಾಲೇಜುಗಳಿಗೆ ಕಟ್ಟಡ ಹಾಗೂ ಶೌಚಾಲಯದ ಕೊರತೆ ಇರುತ್ತದೆ.

ಇ) 20050–06ನೇ ಸಾಲಿನ ಆರ್ಥಿಕ ವರ್ಷದಲ್ಲಿ ಕೊಠಡಿಗಳಿಗೆ ಒದಗಿಸಿದ ಅನುದಾನದಲ್ಲಿ ಆದ್ಯತೆ ಮೇರೆಗೆ ಕೊಠಡಿಗಳ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಗುವುದು.

(ಈ) ಹಚ್ಚುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಗಮನಿಸಿ ಹೊಸ ಕಾಲೇಜುಗಳನ್ನು ಪ್ರಾರಂಭಿಸಲು ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ.

ಉ) ಬಾಲಕಿಯರ ಶಿಕ್ಷಣಕ್ಕೆ ಒತ್ತುಕೊಡಲು ಸರ್ಕಾರವು, ಸರ್ಕಾರಿ ಪ್ರಾಥಮಿಕ ಶಾಲೆಯಿಂದ ಹಿಡಿದು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿನಿಯರಿಗೆ ಶುಲ್ಕಗಳನ್ನು ಮನ್ನಾ ಮಾಡಿದೆ. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದ ಹೆಣ್ಣು ಮಕ್ಕಳಿಗಾಗಿ ರೂ. 600.00ಗಳ ವಿಶೇಷ ಧನವನ್ನು ಸಮಾಜ ಕಲ್ಯಾಣ ಇಲಾಖೆಯು ನೀಡುತ್ತಿದೆ.

2453(2679) ಶ್ರೀ ಅಪ್ಪಸಾಹೇಬ್ (ಅಪ್ಪು):– ಮಾನ್ಯ ವಸತಿ ಸಚಿವರು ದಯವಿಟ್ಟು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬಿಜಾಪುರ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೊಳಚೆ ಪ್ರದೇಶಗಳು ಎಷ್ಟು ಅವು ಯಾವುವು;

ಆ) ಮುಂದೆ ಕೊಳಚೆ ಪ್ರದೇಶದ ವ್ಯಾಪ್ತಿಗೆ ಸೇರಲಿರುವ ಪ್ರದೇಶಗಳು ಯಾವುವು.

ಇ) ಈ ಪ್ರದೇಶಗಳನ್ನು ಯಾವಾಗ ಕೊಳಚೆ ಪ್ರದೇಶಗಳೆಂದು ಸರ್ಕಾರ ಅಧಿಕೃತವಾಗಿ ಘೋಷಿಸಿರುತ್ತದೆ.

ಈ) ಹಾಗಿದ್ದರೆ, ಅವುಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಶ್ರೀ ಅಂಜನಮೂರ್ತಿ (ವಸತಿ ಸಚಿವರು)

ಅ) ಬಿಜಾಪುರ ಮತಕ್ಷೇತ್ರದಲ್ಲಿ ಒಟ್ಟು 55 ಕೊಳಚೆ ಪ್ರದೇಶಗಳನ್ನು ಗುರುತಿಸಿದ್ದು, ಇದರಲ್ಲಿ ಮಂಡಳಿಯ ಕಾಯ್ದೆ ಪ್ರಕಾರ 23 ಕೊಳಚೆ ಪ್ರದೇಶಗಳನ್ನು ಘೋಷಣೆ ಮಾಡಲಾಗಿದೆ. ಪಟ್ಟಿ ಅನುಬಂಧ 'ಅ' ನಲ್ಲಿ ಲಗತ್ತಿಸಿದೆ.

ಆ) ಘೋಷಣೆಯಾಗದಿರುವ / ಗುರುತಿಸಿರುವ 32 ಕೊಳಚೆ ಪ್ರದೇಶಗಳು ಬಿಜಾಪುರ ನಗರದಲ್ಲಿದ್ದು ಕೊಳಚೆ ಪ್ರದೇಶವೆಂದು ಘೋಷಿಸುವಲ್ಲಿ ಅವಶ್ಯವಿರುವ ಗುಣ ಲಕ್ಷಣಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು. ಇವುಗಳ ಪಟ್ಟಿಯನ್ನು ಅನುಬಂಧ 'ಅ' ನಲ್ಲಿ ಲಗತ್ತಿಸಿದೆ.

ಇ) ಬಿಜಾಪುರ ನಗರದಲ್ಲಿ ಇದುವರೆಗೂ ಅಧಿಕೃತವಾಗಿ 23 ಕೊಳಚೆ ಪ್ರದೇಶಗಳನ್ನು ಘೋಷಿಸಲಾಗಿದೆ. ವಿವರಗಳನ್ನು ಅನುಬಂಧ 'ಅ' ನಲ್ಲಿ ಲಗತ್ತಿಸಿದೆ.

ಈ) ಬಿಜಾಪುರ ನಗರದಲ್ಲಿ ನಿರ್ಮಲ ಜ್ಯೋತಿ ಯೋಜನೆಯ ಮೊದಲನೇ ಹಂತದಲ್ಲಿ 8 ಕೊಳಚೆ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು (ರಸ್ತೆ, ನೆಲಹಾಸು, ಕಲ್ವರ್ಟಗಳು ಮತ್ತು ಚರಂಡಿ) ರೂ. 128.70 ಲಕ್ಷಗಳ ವೆಚ್ಚದಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿದೆ. ವಾಂಬೇ ಯೋಜನೆಯಡಿ ವಿವಿಧ ಕೊಳಚೆ ಪ್ರದೇಶಗಳಲ್ಲಿ ಒಟ್ಟು 703 ಮನೆಗಳನ್ನು ನಿರ್ಮಿಸಿ ಪೂರ್ಣಗೊಳಿಸಲಾಗಿದೆ.